ಹೆಸರು ನ್ಮೊಂದಾಯಿಸಿರುವ ಅಭ್ಯರ್ಥಿಗಳ ಹೆಸರುಗಳನ್ನು ವರ್ಗಾಯಿಸುವುದು ಸಮಂಜಸವೆನಿಸುವುದಿಲ್ಲ.

ಕುಂದಾಪುರದಲ್ಲಿ ಕ್ರೀಡಾಂಗಣ ರಚಿಸುವ ಬಗ್ಗೆ

848 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಯುವಜನ ಸೇವಾ ಕ್ರೀಡ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕುಂದಾಪುರದಲ್ಲಿ ಕ್ರೀಡಾಂಗಣಗಳ ರಚಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ ;

ಆ) ಹಾಗಿದ್ದಲ್ಲಿ, ಅದನ್ನು ಯಾವಾಗ ರಚಿಸಲಾಗುವುದು;

ಶ್ರೀ ಎಸ್. ರಮೇಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಬೆಂಕಿ ಹಗರಣದ ಬಗ್ಗೆ

847 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 1 ವರ್ಷದಿಂದ ಈಚೆಗೆ ಕೋರ್ಟ್ ಪೋಲೀಸ್ ಸ್ಟೇಶನ್ ವ್ಯಾಪ್ತಿಯಲ್ಲಿ ಮನೆಗಳಿಗೆ ಬೆಂಕಿ ಹಾಕಿದ ಬಗ್ಗೆ ದೂರು ಬಂದಿದೆಯೆ?

ಆ) ಬಂದಿದ್ದಲ್ಲಿ ದೂರು ನೀಡಿದವರ ಮತ್ತು ಅಪರಾಧಿಗಳ ಪೂರ್ಣ ವಿಳಾಸವನ್ನು ನೀಡುವುದು.

ಇ) ಪ್ರತಿ ಪ್ರಕರಣಗಳಲ್ಲಿ ಸಂಬಂಧಿಸಿದ ನಷ್ಟವೆಷ್ಟು? (ಪ್ರಕರಣವಾರು ಹೆಸರು ದಿನಾಂಕ ಸಹಿತ ವಿವರ)

ಈ) ಈ ಬಗ್ಗೆ ತಪ್ಪಿತಸ್ಥರ ಮೇಲೆ ತೆಗೆದುಕೊಳ್ಳಲಾದ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಗೃಹ ಮಂತ್ರಿಗಳು):

ಅ) ಹೌದು, ಬಂದಿದೆ.

ಆ) ಅಪರಾದ ಸಂಖ್ಯೆ 10:90 ಕ್ಕೆ ಸಂಬಂಧಿಸಿದಂತೆ (ಶೇಂದಿ ಅಂಗಡಿ) ಪಿರ್ಯಾದಿದಾರರು - ನಂಜಪ್ಪ ಶೆಟ್ಟಿ ಆರೋಪಿತರು ಇಲ್ಲ.

ಇ) ಅಪರಾಧ ಸೌಖ್ಯೆ 8:90ಕ್ಕೆ ಸಂಬಂಧಿಸಿದಂತೆ ಫಿರ್ಯಾದಿದಾರರು-ಅಮ್ಮಣ್ಣಿ ಪೂಜಾರ್ತಿ-ಹೋಮಡಿ ಮಂಡಡಿ ಗ್ರಾಮ, ದಕ್ಷಿಣ ಕನ್ನಡ ಜಿಲ್ಲೆ, ಆರೋಪಿತರು

(1) ಮಂಜಯ್ಯ ಶೆಟ್ಟಿ (2) ಮಣಿ ಮಾಗೇರ (3) ಬೋಜ ಮಾಗೇರ (4) ರಾಜು ಕುಲಾಲ್ ಎಲ್ಲರೂ ದೊಂಬಾಡಿ ಮಂಡಡಿ ಗ್ರಾಮದವರು ಅಪರಾದ ಸಂಖ್ಯೆ: 14:91 ಕ್ಕೆ (ಸರಾಯಿ ಅಂಗಡಿ) ಸಂಬಂಧಿಸಿದಂತೆ ಬೆಳಿಯ ನಾಯಕ ಅವರು ದೂರು ನೀಡಿರುತ್ತಾರೆ. ಅಪರಾಧಿ ಹೆಸರು ತಿಳಿಸಿರುವುದಿಲ್ಲ.

ಈ) ಕೋಟಿ ಪೋಲೀಸ್ ಠಾಣೆ ಅಪರಾಧ ಸೌಖ್ಯೆ : 10:90ರಲ್ಲಿ 500 ರೂಪಾಯಿ 8:91ರಲ್ಲಿ 700 ರೂ. ಮತ್ತು 14:91ರಲ್ಲಿ 1000ರೂ. ನಷ್ಟ ಉಂಟಾಗಿರುತ್ತದೆ.

ಉ) ಕೋಟ ಪೋಲೀಸ್ ಠಾಣೆ ಅಪರಾಧ ಸಂಖ್ಯೆ 10:90ರಲ್ಲಿ ನ್ಯಾಯಾಲಯಕ್ಕೆ 'ಸಿ' ಅಂತಿಮ ವರದಿ ಸಲ್ಲಿಸಲಾಗಿದೆ.

ಊ) 8:91 ರಲ್ಲಿ ಪ್ರಕರಣ ನೊಂದಾಯಿಸಿಕೊಂಡು ಆರೋಪಿಯನ್ನು ದಿನಾಂಕ 25-1-1991 ರಂದು ನ್ಯಾಯಾಲಕ್ಕೆ ಹಾಜರ್ಪಡಿಸಿದೆ.ಇವೆಲ್ಲರು ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ಸದರಿ ವಿಷಯವು ತನಿಖೆಯಲ್ಲಿರುತ್ತದೆ ಮತ್ತು 14:91ರ ಪ್ರಕರಣವು ತನಿಖೆಯಲ್ಲಿರುತ್ತದೆ.

ಕುಂದಾಪುರಕ್ಕೆ ಅಗ್ನಿಶಾಮಕ ದಳ ಒದಗಿಸುವುದು.

802 - ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಕುಂದಾಪುರಕ್ಕೆ ಅಗ್ನಿಶಾಮಕ ದಳ ಒದಗಿಸುವ ಬಗ್ಗೆ ಬಹಳ ಹಿಂದಿನಿಂದಲೂ ಬೇಡಿಕೆ ಸಲ್ಲಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಸೌಲಭ್ಯವನ್ನು ಯಾವಾಗ ಒದಗಿಸಲಾಗುವುದು.

ಶ್ರೀ ಧರ್ಮಸಿಂಗ್ (ಗೃಹ ಸಚಿವರು)

ಅ) ಹೌದು.

ಆ) ಆರ್ಥಿಕ ಪರಿಸ್ಥಿತಿ ಮತ್ತು ಆದ್ಯತೆ ಅನುಸರಿಸಿ ಕುಂದಾಪುರದಲ್ಲಿಯೂ ಅಗ್ನಿಶಾಮಕ ಠಾಣೆಯನ್ನು ತರೆಯುವ ಪ್ರಸ್ತಾವನೆಯನ್ನು ಮುಂದಿನ ಅವಧಿಯಲ್ಲಿ ಪರಿಶೀಲಿಸಲಾಗುವದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷ ಘಟಕ ಗುಡ್ಡಗಾಡು ಜನರ ಅಭಿವೃದ್ಧಿ ಯೋಜನೆ ಬಗ್ಗೆ

422 - ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಕಾನೂನು ಸಚಿವರು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಗಳಿಗೆ 1990-91ನೇ ವರ್ಷದಲ್ಲಿ ಮೀಸಲಾಗಿಟ್ಟ ಹಣ ಎಷ್ಟು?

ಆ) ಅದರಲ್ಲಿ ಈ ತನಕ ಖರ್ಚಾಗಿರುವ ಹಣವೆಷ್ಟು?

ಇ) ಈ ಪೈಕಿ ಯಾವ ಯಾವ ಬಾಬ್ತುಗಳಿಗೆ ಹಣ ಖರ್ಚಾಗದೆ ಬಾಕಿ ಉಳಿದಿದೆ.

ಈ) ಯೋಜನೆಗಳನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸುವಲ್ಲಿ ತೊಂದರೆಗಳೇನಾದರೂ ಇದೆಯೇ?

ಉ) ಹಾಗಿದ್ದಲ್ಲಿ ಅಂತಹ ತೊಂದರೆಗಳೇನು?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು)

ಅ) ದಕ್ಷಿಣ ಜಿಲ್ಲೆಗೆ 1990-91ನೇ ವರ್ಷದಲ್ಲಿ ಮೀಸಲಿಟ್ಟ ಹಣ ಈ ಕೆಳಕಂಡಂತಿದೆ.

ಆ) ವಿಶೇಷ ಘಟಕ ಯೋಜನೆಯಡಿ ಗಿರಿಜನ ಉಪಯೋಜನೆಯಡಿ ರೂ.114.82 ಲಕ್ಷ ರೂ. 145.69 ಲಕ್ಷ.

ಇ) ಈವರೆಗೆ ಖರ್ಚಾಗಿರುವ ಹಣ (ಫೆಬ್ರವರಿ 91ರವರೆಗೆ) ಈ ಕೆಳಕಂಡಂತಿದೆ.